ನೇರನೋಟ

ಶಶಿಧರ ಹಾಲಾಡಿ
ಪತ್ರಕರ್ತರು
shashidhara.halady@gmail.com

ಕಬ್ಬನ್ ಪಾರ್ಕ್ ಹಸಿರಿನ ಸಿರಿ ಉಳಿದೀತೆ?

ಕಬ್ಬನ್ ಪಾರ್ಕ್‌ನಲ್ಲಿ ಏಳು ಮಹಡಿಗಳ ಹೊಸ ಕಟ್ಟಡಕ್ಕೆ ಉಚ್ಚನ್ಯಾಯಾಲಯವು ಅನುಮತಿ ನೀಡಿದ್ದನ್ನು ಕಂಡು, ಕಳವಳಗೊಂಡ ಪರಿಸರ ಪ್ರೇಮಿಗಳು, 'ಕಬ್ಬನ್ ಪಾರ್ಕ್ ಉಳಿಸಿ' ಆಂದೋಲನಕ್ಕೆ ಆರಂಭಿಸಿದ್ದಾರೆ.

ಇನ್ನು ಸುಮಾರು ಹತ್ತು ವರ್ಷಗಳಲ್ಲಿ ನಮ್ಮ ದೇಶದ ವಾತಾವರಣ ಇನ್ನಷ್ಟು ಬಿಗಡಾಯಿಸಿ, ಎಲ್ಲೆಲ್ಲೂ ಕಲ್ಮಶಗಳು ತುಂಬಿಕೊಳ್ಳುತ್ತವೆ ಎಂಬ ಎಚ್ಚರಿಕೆ ಈಗಾಗಲೇ ದೊರೆತಿದೆ. ಮನುಷ್ಯನ ಸ್ವಯಂಕೃತ ಅಪರಾಧ ಎನಿಸುವಂತಹ ಚಟುವಟಿಕೆಗಳು ಹೀಗೆಯೇ ಮುಂದುವರಿದರೆ 2050ರ ಸಮಯಕ್ಕೆ, ಇಡೀ ಭೂಮಂಡಲದ ವಾತಾವರಣ ಕಲುಷಿತಗೊಂಡು, ಮನುಷ್ಯನು ಉಸಿರಾಡಲು ಪರದಾಡಬೇಕಾದೀತು ಎಂದು ನೂರಾರು ಜನ ಪ್ರಾಜ್ಞರು, ಚಿಂತಕರು ಎಚ್ಚರಿಸಿದ್ದಾರೆ. ಭೂಮಂಡಲದ ವಿಚಾರ ಬಿಡಿ, ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿ ಕಳೆದ ವಾರ ಮಕ್ಕಳು, ವೃದ್ಧರು ಉಸಿರಾಡಲು ಏದುಸಿರು ಬಿಡುವಂತಾಯಿತು; ಇಡೀ ವಿಶ್ವದಲ್ಲೇ ಅತಿ ಹೆಚ್ಚು ವಾಯು ಮಾಲಿನ್ಯ ತುಂಬಿದ ನಗರವಾಗಿ 'ದೆಹಲಿ' ರೂಪುಗೊಂಡಿತು. ಹೊಗೆ, ದೂಳು, ಕಲ್ಮಶಗಳು ತುಂಬಿ ಹೋದವು. ಪಂಜಾಬಿನ ರೈತರು ಬತ್ತದ ಹುಲ್ಲು ಸುಡುವುದು, ವಾಹನಗಳ ಡೀಸೆಲ್ ಹೊಗೆ, ದೀಪಾವಳಿಯ ದಿನ ಮನಬಂದಂತೆ, ಮತಿಹೀನರಾಗಿ ಜನರು ಸುಟ್ಟ ಪಟಾಕಿಯ ಹೊಗೆ, ಎಗ್ಗಿಲ್ಲದೇ ದೂಳು ಹಾರಿಸುವ ಚಟುವಟಿಕೆ ನಡೆಸಿದ್ದು–ಇವೆಲ್ಲವೂ ಸೇರಿ, ದೆಹಲಿಯು ಅಕ್ಷರಶ ವಿಷಗಾಳಿಯ ನಗರವಾಗಿ ಮಾರ್ಪಟ್ಟು, ಅಲ್ಲಿನ ಸರಕಾರವೇ ಜನರಿಗೆ 'ಹೊರಗೆ ಜಾಸ್ತಿ ಓಡಾಡಬೇಡಿ' ಎಂದು ಎಚ್ಚರಿಸುವಂತಾಯಿತು.

ದೂರದ ದೆಹಲಿ ತಾನೆ, ಎಂದು ಸುಮ್ಮನಿರಬಹುದೆ, ಕರ್ನಾಟಕದವರು, ಅದರಲ್ಲೂ ಬೆಂಗಳೂರಿನವರು? ದೆಹಲಿಗೆ ಹೋಲಿಸಿದರೆ, ಇಲ್ಲಿ ಕಲ್ಮಶ ಕಡಿಮೆ ಎಂದು ನಿರ್ಲಕ್ಷ್ಯ ತೋರಿ, ನಮ್ಮ ಪಾಡಿಗೆ ನಾವು ಇರಬಹುದೆ? ಖಂಡಿತಾ ಇಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಬೆಂಗಳೂರು ಸಹ ಸಾಕಷ್ಟು ಕಲ್ಮಶಭರಿತ ವಾತಾವರಣವನ್ನು ಹೊಂದುವ ಅಪಾಯವಿದೆ ಎಂದು ಅದಾಗಲೇ ಸಾಕಷ್ಟು ಎಚ್ಚರಿಕೆಗಳು ಬಂದಿವೆ.

ಮುಖ್ಯವಾಗಿ 2008ರ ನಂತರ, ಮೆಟ್ರೋ ಮಾರ್ಗದ ನಿರ್ಮಾಣಕ್ಕಾಗಿ ಮತ್ತು ಕೆಲವು ಫ್ಲೈಓವರ್ ನಿರ್ಮಾಣಕ್ಕಾಗಿ ಜಾಗ ಮಾಡಿಕೊಡಲು ಸಾವಿರಾರು ಬೃಹತ್ ಮರಗಳನ್ನು ನಾಶಮಾಡಿದ ನಂತರ, ಬೆಂಗಳೂರಿನ ವಾತಾವರಣವೇ ಬದಲಾಗಿ ಹೋಗಿದೆ. 2010ರ ನಂತರ, ಬೆಂಗಳೂರಿನ ಬೇಸಿಗೆಯು ಸಾಕಷ್ಟು ಉಷ್ಣತೆಯನ್ನು ತೋರುತ್ತಿರುವುದು ಒಂದೆಡೆಯಾದರೆ, ಬೆಂಗಳೂರಿನ ಬಡಾವಣೆಗಳಲ್ಲಿ ವಾಹನಗಳು ಸೂಸುವ ಹೊಗೆ ಭರಿತ ಗಾಳಿಯ ಸೇವನೆ ಅನಿವಾರ್ಯ ಎನಿಸಿದೆ. ಕಳೆದ ಒಂದು ದಶಕದಲ್ಲಿ ಬೆಂಗಳೂರು ಕಂಡ ಅಡ್ಡಾದಿಡ್ಡ ಬೆಳವಣಿಗೆ ಮತ್ತು ಮೆಟ್ರೋ ರೈಲುಗಳ ಸಂಚಾರಕ್ಕೆಂದು ನಗರದ ಮಧ್ಯದಲ್ಲೇ ಕಡಿದು ಹಾಕಿದ ಮರಗಳಿಂದಾಗಿ, ಇಲ್ಲಿನ ವಾತಾವರಣವೇ ಬೃಹತ್ ಪ್ರಮಾಣದಲ್ಲಿ ಬದಲಾಗಿ ಹೋಗಿದೆ ಎಂಬುದರಲ್ಲಿ ಲವಲೇಶ ಅನುಮಾನವಿಲ್ಲ. ಉದ್ಯಾನವನಗಳ ನಗರ ಎಂಬ ಹೆಸರಿನಲ್ಲಿ, ಸಾಕಷ್ಟು ತಂಪು ಪ್ರದೇಶ ಎಂಬ ಬೆಂಗಳೂರಿನ ಹೆಗ್ಗಳಿಕೆಯು ಕ್ರಮೇಣ ನಾಶವಾಗುವ ಹಂತದಲ್ಲಿದೆ.

ಕಳೆದ ವಾರ ಬೆಂಗಳೂರಿನ ನೂರಾರು ನಾಗರಿಕರು ಮರಗಳ ಪರವಾಗಿ, ಪರಂಪರೆಯ ಉಳಿವಿನ ಪರವಾಗಿ ಪ್ರತಿಭಟನೆ ನಡೆಸಿದ್ದು ಒಂದು ಸುದ್ದಿಯಾಯಿತು. ಬೆಂಗಳೂರಿನ ಶ್ವಾಸಕೋಶಗಳಲ್ಲಿ ಒಂದು ಎಂದೇ ಗುರುತಿಸಲ್ಪಟ್ಟಿರುವ ಕಬ್ಬನ್ ಪಾರ್ಕ್‌ನಲ್ಲಿ ಏಳು ಮಹಡಿಗಳ ಹೊಸ ಕಟ್ಟಡಕ್ಕೆ ಉಚ್ಚನ್ಯಾಯಾಲಯವು ಅನುಮತಿ ನೀಡಿದ್ದನ್ನು ಕಂಡು, ಕಳವಳಗೊಂಡ ಪರಿಸರ ಪ್ರೇಮಿಗಳು, 'ಕಬ್ಬನ್ ಪಾರ್ಕ್ ಉಳಿಸಿ' ಎಂಬ ಮನವಿಯೊಂದಿಗೆ ಪ್ರದರ್ಶನ ನಡೆಸಿದರು. ಈಗಾಗಲೇ ಅವನತಿಯ ಹಾದಿ ಹಿಡಿದಿರುವ ಬೆಂಗಳೂರಿನ ಹಸಿರು ಹೊದಿಕೆಯು, ಈ ರೀತಿಯ ಕಟ್ಟಡ ನಿರ್ಮಾಣ ಚಟುವಟಿಕೆಯಿಂದ ಇನ್ನಷ್ಟು ನಲುಗುವುದು ಎಂಬ ಈ ನಾಗರಿಕರ ಕಾಳಜಿ, ಕಳಕಳಿ ನಿಜಕ್ಕೂ ಪ್ರಾಮಾಣಿಕ ಎಂದೇ ಹೇಳಬೇಕು. ನಗರ ಮಧ್ಯೆ ಇರುವ ಕಬ್ಬನ್ ಪಾರ್ಕ್, ಆ ಪ್ರದೇಶದ ವಾತಾವರಣವನ್ನು ಸುಸ್ಥಿತಿಯಲ್ಲಿಡಲು ತನ್ನದೇ ಕಾಣಿಕೆ ನೀಡುತ್ತಿದೆ; ಆ ಮರಗಿಡಗಳ ಮಧ್ಯೆ ಹೊಸದೊಂದು ಕಟ್ಟಡ ತಲೆ ಎತ್ತಿದರೆ, ಸಹಜವಾಗಿ ಅಷ್ಟರ ಮಟ್ಟಿಗಿನ ಪರಿಸರ ನಾಶವಾಗುತ್ತದೆ ಎಂಬ ಅವರ ಕಳಕಳಿ ಮನನೀಯ.

ಆದರೆ, ಈ ಹೊಸ ಕಟ್ಟಡದ ವಿವರ ಕುತೂಹಲಕಾರಿಯಾಗಿದ್ದು, ಉಚ್ಚ ನ್ಯಾಯಾಲಯದ ಅನುಮತಿಯ ಮೇರೆಗೆ ಆ ಯೋಜನೆ ಚಾಲನೆಗೆ ಬಂದಿದೆ. ಉಚ್ಚ ನ್ಯಾಯಾಲಯದ ಹಿಂದಿನ ಒಂದು ಆದೇಶದಂತೆ, ಕಳೆದ ಎರಡು ದಶಕಗಳಿಂದ ಕಬ್ಬನ್ ಪಾರ್ಕ್ ಸರಹದ್ದಿನಲ್ಲಿ ಯಾವುದೇ ಪರಿಸರ ನಾಶ ಆಗಿಲ್ಲ; ಜಿ.ಕೆ.ಗೋವಿಂದ ರಾವ್ ವರ್ಸಸ್ ಸ್ಟೇಟ್ ಆಫ್ ಕರ್ನಾಟಕ ಮತ್ತು ಇತರರು (2001) ಪ್ರಕರಣಕ್ಕೆ ಸಂಬಂಧಿಸಿದ ಆದೇಶದಲ್ಲಿ, ಕಬ್ಬನ್ ಪಾರ್ಕ್ ಮಿತಿಯಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಬೇಕೆಂದರೂ, ನ್ಯಾಯಾಲಯದ ಅನುಮತಿ ಪಡೆಯಬೇಕಿತ್ತು. ಈ ಆದೇಶದ ಹಿನ್ನೆಲೆಯಲ್ಲಿ, ಸುಮಾರು 17 ಮರಗಳನ್ನು ಕಡಿದು ಹೊಸ ಕಟ್ಟಡ ಕಟ್ಟಲು ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್ ಅವರು ಉಚ್ಚನ್ಯಾಯಾಲಯಕ್ಕೆ 2014ರಲ್ಲಿ ಅಪೀಲು ಸಲ್ಲಿಸಿದ್ದರು. ಈ ಪಿಟಿಷನ್ ಸಲ್ಲಿಸಿ ಐದು ವರ್ಷಗಳ ನಂತರ, ಉಚ್ಚ ನ್ಯಾಯಾಲಯವು ಆದೇಶ ನೀಡಿ, ಯಾವುದೇ ಮರವನ್ನು ಕಡಿಯದೇ, ಹೊಸ ಕಟ್ಟಡ ಕಟ್ಟಲು ಅನುಮತಿ ನೀಡಿದೆ. ಅದಕ್ಕೆ ಪೂರಕವಾಗಿ, ಪರಿಷ್ಕೃತ ಯೋಜನೆಯಂತೆ, ಯಾವುದೇ ಮರವನ್ನು ಕಡಿಯದೆ, 4924 ಚದರ ಮೀಟರ್ ವಿಸ್ತೀರ್ಣದ ಕಟ್ಟಡ ನಿರ್ಮಾಣಕ್ಕೆ ಅವಕಾಶ ದೊರೆತಂತಾಗಿದೆ. ಕಬ್ಬನ್ ಪಾರ್ಕ್‌ನಲ್ಲಿರುವ ಪ್ರೆಸ್ ಕ್ಲಬ್ ಮತ್ತು ಹಳೆಯ ಕೆಜಿಐಡಿ ಕಟ್ಟಡದ ನಡುವೆ ಇರುವ ಹಳೆಯ ಚುನಾವಣಾ ಕಮಿಷನರ್ ಅವರ ಕಚೇರಿಯನ್ನು ಸಂಪೂರ್ಣ ಕೆಡವಿ, ಆ ಸ್ಥಳದಲ್ಲಿ ಹೊಸ ಕಟ್ಟಡವನ್ನು ಕಟ್ಟುವ ಯೋಜನೆ ಇದ್ದು, ಇದು ಹೈಕೋರ್ಟ್ ಸಂಕೀರ್ಣಕ್ಕೆ ಸಂಬಂಧಿಸಿದ್ದಾಗಿದ್ದು, ಅದಕ್ಕೆ ಈಗ ಹೈಕೋರ್ಟ್‌ನಿಂದ ಅನುಮತಿ ದೊರೆತಿದೆ.

ಉಚ್ಚನ್ಯಾಯಾಲಯದ ಅನುಮತಿಯೊಂದಿಗೇ ನಿರ್ಮಾಣವಾಗಲು ಉದ್ದೇಶಿತಗೊಂಡಿರುವ ಈ ಕಟ್ಟಡ ನಿರ್ಮಾಣ ಚಟುವಟಿಕೆಯು, ಪರಿಸರ ಪ್ರೇಮಿಗಳ ಆತಂಕವನ್ನು ಹೆಚ್ಚಿಸಿದೆ. ಸೂಕ್ತ ಅನುಮತಿಯೊಂದಿಗೆ, ಯಾವುದೇ ಮರವನ್ನು ಕಡಿಯದೇ ಏಳು ಮಹಡಿಯ ಕಟ್ಟಡ ಕಟ್ಟುವ ಯೋಚನೆ ಮೇಲ್ನೋಟಕ್ಕೆ ಪರಿಸರಕ್ಕೆ ಹಾನಿಯನ್ನುಂಟುಮಾಡದೇ ಇರಬಹುದು. ಆದರೆ, ಏಳು ಮಹಡಿ ಮತ್ತು ಎರಡು ಬೇಸ್‌ಮೆಂಟ್ ಹೊಂದಿರಬಹುದಾದ ಈ ಬೃಹತ್ ಕಟ್ಟಡ ನಿರ್ಮಾಣ ಸಮಯದಲ್ಲಿ, ಸಹಜವಾಗಿ ಅಲ್ಲಿನ ಹಸಿರು ಹೊದಿಕೆಗೆ ಹಾನಿಯಾಗುವ ಸಾಧ್ಯತೆ ಇದೆ ಎಂಬುದೇ ಪರಿಸರ ಪ್ರೇಮಿಗಳ ಅಳಲು. ಇಂದು ನಮ್ಮ ನಗರಗಳಲ್ಲಿ ಕಟ್ಟಡ ನಿರ್ಮಾಣ ಪ್ರಕ್ರಿಯೆ ಮತ್ತು ಆ ಸಮಯದಲ್ಲಿ ಅವರು ಅನುಸರಿಸುತ್ತಿರುವ ಎಚ್ಚರಿಕೆಯನ್ನು ಗಮನಿಸಿದರೆ, ಆ ಕೂಗಿನಲ್ಲಿ ಸತ್ಯಾಂಶವನ್ನು ಗುರುತಿಸಬಹುದು. ಕಟ್ಟಡ ನಿರ್ಮಾಣ ಕೆಲಸಗಾರರಿಗೆ ಮತ್ತು ಕೆಳಮಟ್ಟದ ಸೂಪರ್ ವೈಸರ್‌ಗಳಿಗೆ ತಮ್ಮ ಕೆಲಸ ಸುಲಭದಲ್ಲಿ ಮುಗಿಯುವುದು ಪ್ರಥಮ ಆದ್ಯತೆಯೇ ಹೊರತು, ಸುತ್ತಲಿನ ಪರಿಸರದ ಆರೋಗ್ಯ ಕಾಪಾಡುವುದು ಅಲ್ಲವೇ ಅಲ್ಲ; ವಸ್ತುಸ್ಥಿತಿ ಹೀಗಿರುವಾಗಿ, ಕಬ್ಬನ್ ಪಾರ್ಕಿನ ಮರಗಿಡಗಳ ಆರೋಗ್ಯವನ್ನು ನೋಡಿಕೊಳ್ಳುವುದಾದರೂ ಹೇಗೆ? ಆದರೆ, ಉಚ್ಚ ನ್ಯಾಯಾಲಯವೇ ಅನುಮತಿ ನೀಡಿರುವುದರಿಂದಾಗಿ, ಮತ್ತೊಮ್ಮೆ ಮನವಿ ಮಾಡಿ ಕಬ್ಬನ್ ಪಾರ್ಕಿನ ಮತ್ತು ನಗರದ ಪರಿಸರದ ಕ್ಷೇಮವನ್ನೂ ಗಮನಿಸಬೇಕೆಂದು ಕೇಳಿಕೊಳ್ಳುವುದೇ ಈಗ ಉಳಿದಿರುವ ಮಾರ್ಗ ಎನ್ನಬಹುದು.

ಈಗಾಗಲೇ ವಿಪರೀತ ಬೆಳೆದಿರುವ ಬೆಂಗಳೂರು ನಗರದ ಆರೋಗ್ಯವನ್ನು ಕಾಪಾಡಬೇಕಾದರೆ, ಕೋರ್ ಏರಿಯಾ ಅಥವಾ ಮಧ್ಯಭಾಗದ ಬೆಂಗಳೂರಿನಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳಲು ಅನುಮತಿ ನೀಡಲೇ ಬಾರದು.

ಭಾರತದ ಇತರ ದೊಡ್ಡನಗರಗಳ ವಾತಾವರಣಕ್ಕೆ ಹೋಲಿಸಿದರೆ, ಈಗ ಬೆಂಗಳೂರಿನ ವಾತಾವರಣ ಸಾಕಷ್ಟು ಶುದ್ಧ ಎಂದೇ ಹೇಳಬಹುದು. ದೆಹಲಿ, ಲಕ್ನೋ ಮೊದಲಾದ ನಗರಗಳ ಕಲುಷಿತ ಗಾಳಿಯನ್ನು ಕಂಡು ರೋಸಿ ಹೋದ ಉತ್ತರ ಭಾರತೀಯರು, ಮೇಲ್ನೋಟಕ್ಕೆ ಇನ್ನೂ ಶುದ್ಧವಾಗಿ ಕಾಣಿಸುವ ಬೆಂಗಳೂರನ್ನು ತಮ್ಮ ಖಾಯಂ ವಸತಿಯನ್ನಾಗಿ ಆಯ್ದುಕೊಳ್ಳುತ್ತಿದ್ದಾರೆ. ಅಲ್ಲಲ್ಲಿ ಹಸಿರು ತುಂಬಿದ ಉದ್ಯಾನವನಗಳು, ರಸ್ತೆಯ ಪಕ್ಕದಲ್ಲಿ ದೊಡ್ಡ ದೊಡ್ಡ ಹಸಿರಿನ ಮರಗಳು, ಕಾವೇರಿಯಿಂದ ಹರಿದು ಬರುವ ನೀರು, ದೂಳು ಕಡಿಮೆ ಇರುವ ಬಡಾವಣೆಗಳು–ಇವೆಲ್ಲವೂ ಬೆಂಗಳೂರನ್ನು ಸ್ವರ್ಗ ಸಮಾನವಾಗಿಸಿವೆ. ತಮ್ಮ ಸ್ವಂತ ಊರನ್ನೇ ತೊರೆದು, ದೂರದ ಬೆಂಗಳೂರಿಗೆ ವಲಸೆ ಬಂದು ಇಲ್ಲೇ ನೆಲೆಸುವ ಅವರೆಲ್ಲರ ಪ್ರಮುಖ ಆಕರ್ಷಣೆ ಎಂದರೆ ಇಲ್ಲಿನ ವಾತಾವರಣ. ಕಳೆದ ದಶಕದ ತನಕ ಸಾಕಷ್ಟು ಕಡಿಮೆ ವಾಯುಮಾಲಿನ್ಯ ಹೊಂದಿದ್ದ ಬೆಂಗಳೂರು ಎಲ್ಲರ ಅಚ್ಚುಮೆಚ್ಚಿನ ತಾಣವಾಗಿದ್ದರಲ್ಲಿ ಅಚ್ಚರಿ ಇಲ್ಲ.

ಆದರೆ, ಕಳೆದ ಕೆಲವು ವರ್ಷಗಳಿಂದ ಬೆಂಗಳೂರಿನ ವಾತಾವರಣ, ನೋಟ ಎಲ್ಲವೂ ಬದಲಾಗಿದೆ. ಅನಿಯಂತ್ರಿತವಾಗಿ, ಎಲ್ಲೆಂದರಲ್ಲಿ ಬೆಳೆಯುತ್ತಿರುವ ನಗರದ ಬಾಹುಗಳು ಒಂದೆಡೆಯಾದರೆ, ಈಗಾಗಲೇ ಅಭಿವೃದ್ಧಿ ಹೊಂದಿರುವ ಭಾಗಗಳಲ್ಲಿ ತುಂಬುತ್ತಿರುವ ಕಸ, ಮಾಲಿನ್ಯ ಇನ್ನೊಂದೆಡೆ. ಕಳೆದ ಅರ್ಧ ಶತಮಾನದಲ್ಲಿ, 'ವೃಷಭಾವತಿ'ಯಂತಹ ನದಿಯನ್ನೇ ಕೊಚ್ಚೆಯ ವೈತರಣಿಯನ್ನಾಗಿ ಪರಿವರ್ತಿಸಿದ ನಗರ ವಿಸ್ತರಣಾ ಚಟುವಟಿಕೆಯು, ಕಳೆದ ದಶಕದಿಂದ ಇಲ್ಲಿನ ವಾಯು ಮಾಲಿನ್ಯಕ್ಕೆ ಕುಠಾರ ಎನಿಸುವ ಕೊಡುಗೆಯನ್ನು ನೀಡುತ್ತಿದೆ. ಯಾರದೇ ಅಡೆತಡೆ ಇಲ್ಲದೇ ಎಲ್ಲೆಂದರಲ್ಲಿ ಎಸೆಯುತ್ತಿರುವ ದೂಳು, ಕಟ್ಟಡ ತ್ಯಾಜ್ಯಗಳು, ಮಣ್ಣು, ಸಿಮೆಂಟ್ ತ್ಯಾಜ್ಯಗಳು ತಮ್ಮದೇ ರೀತಿಯಲ್ಲಿ ಇಲ್ಲಿನ ವಾಯುಮಾಲಿನ್ಯಕ್ಕೆ ಕೊಡುಗೆ ನೀಡುತ್ತಿವೆ.

ಮೈಕ್ರೋಪಾರ್ಟಿಕಲ್‌ಗಳು ಇಲ್ಲಿನ ಗಾಳಿಯಲ್ಲಿ ಹೆಚ್ಚು ಹೆಚ್ಚು ಸೇರಿಕೊಳ್ಳುತ್ತಿವೆ. ವಾಹನಗಳು ಉಗುಳುವ ಹೊಗೆ, ರಸ್ತೆ ಪಕ್ಕದ ದೂಳು, ಕಟ್ಟಡ ನಿರ್ಮಾಣ ನಡೆಯುವಾಗ ಗಾಳಿಯೊಂದಿಗೆ ಮಿಶ್ರಣಗೊಳ್ಳುತ್ತಿರುವ ಕಲ್ಮಶಗಳು, ಮೈಕ್ರೊಪಾರ್ಟಿಕಲ್‌ಸ್ನು ವಾತಾವರಣಕ್ಕೆ ಸೇರಿಸುತ್ತಿವೆ. ದೆಹಲಿಯಂತಹ ನಗರಗಳ ವಾಯುವಿನಲ್ಲಿರುವ ಮೈಕ್ರೊಪಾರ್ಟಿಕಲ್‌ಗೆ ಹೋಲಿಸಿದರೆ, ಅದರ ಹತ್ತನೇ ಒಂದರಷ್ಟು ಮಾತ್ರ ಇರುವ ಇಲ್ಲಿನ ಮಾಲಿನ್ಯವು, ದಿನದಿಂದ ದಿನಕ್ಕೆ ಕ್ರಮೇಣ ಜಾಸ್ತಿಯಾಗುತ್ತಿರುವುದು ದಿಗಿಲು ಹುಟ್ಟಿಸುವ ಸಂಗತಿ.

ಮರಗಿಡಗಳು ಸುತ್ತಲಿನ ವಾತಾವರಣದ ಕಾರ್ಬನ್ ಡೈಕ್ಸೈಡ್‌ನ್ನು ಹೀರಿಕೊಂಡು, ಆಮ್ಲಜನಕವನ್ನು ಉತ್ಪತ್ತಿ ಮಾಡುವ ಪ್ರಮುಖ ಕೆಲಸವನ್ನು ಮಾಡುತ್ತಿರುವುದರ ಜತೆಯಲ್ಲೇ, ದೂಳು ನಿಯಂತ್ರಣದಲ್ಲಿ ತಮ್ಮದೇ ಕೊಡುಗೆ ನೀಡುತ್ತಿವೆ. ಗಾಳಿಯಲ್ಲಿ ಸಂಚರಿಸುವ ದೂಳು, ಮೈಕ್ರೋಪಾರ್ಟಿಕಲ್‌ಸ್ನು ಮರಗಿಡಗಳ ಎಲೆಗಳು, ಸೋಸುತ್ತವೆ ಅಥವಾ ಫಿಲ್ಟರ್ ಮಾಡುತ್ತವೆ. ಹುಣಸೆಯಂತಹ ಸಂಕೀರ್ಣ ಎಲೆಗಳನ್ನು ಹೊಂದಿರುವ ಮರಗಳಿಂದ, ಈ ಸೋಸುವಿಕೆಯ ಪರಿಣಾಮ ಜಾಸ್ತಿ. ಆ ಎಲೆಗಳ ಮೂಲಕ ಹಾದುಹೋಗುವ ಗಾಳಿಯಲ್ಲಿರುವ ದೂಳು ಮತ್ತಿತರ ಕಲ್ಮಶ ಸಾಕಷ್ಟು ಪ್ರಮಾಣದಲ್ಲಿ ತಡೆಯಲ್ಪಟ್ಟು, ಗಾಳಿ ಶುದ್ಧೀಕರಣಗೊಳ್ಳುತ್ತದೆ. ಮರಗಿಡಗಳ ಸಂಖ್ಯೆ ಕಡಿಮೆಯಾದಷ್ಟೂ, ದೂಳನ್ನು ತಡೆಯುವ ಈ ಪ್ರಕ್ರಿಯೆಗೆ ತಡೆ ಇಲ್ಲದಂತಾಗಿ, ವಾಯು ಮಾಲಿನ್ಯ ಜಾಸ್ತಿಯಾಗುತ್ತಲೇ ಹೋಗುತ್ತದೆ.

ಬೆಂಗಳೂರು ಆ ನಿಟ್ಟಿನಲ್ಲಿ ಅದೃಷ್ಟ ಮಾಡಿರುವ ನಗರ ಎಂದೇ ಹೇಳಬೇಕು; ಹಿಂದಿನ ತಲೆಮಾರಿನ ಯೋಜಕರ, ಆಳುವವರ, ಪ್ರಾಜ್ಞ ಅಧಿಕಾರಿಗಳ ಮತ್ತು ನಾಗರಿಕರ ಕಾಳಜಿಯಿಂದಾಗಿ ಎಲ್ಲೆಡೆ ಮರಗಿಡಗಳು ಬೆಳೆದಿವೆ; ಹಲವು ಬಡಾವಣೆಗಳಲ್ಲಿ ಪಾರ್ಕ್‌ಗಳಿವೆ; ಈ ನಗರಕ್ಕೆ ಸಾಕಷ್ಟು ಹಸಿರು ಹೊದಿಕೆ ಇದೆ. ಅದನ್ನು ಹೀಗೆಯೇ ಉಳಿಸಿಕೊಂಡರೆ, ಅಷ್ಟರ ಮಟ್ಟಿಗಾದರೂ, ವಾತಾವರಣದ ಸ್ವಾಸ್ಥ್ಯವನ್ನು ಕಾಪಾಡಬಹುದು. ಆದರೆ, ಈ ಸುಂದರ ನಗರದಲ್ಲಿ ಕಳೆದ ಒಂದು ದಶಕದಿಂದ ನಡೆದಿರುವ ಹಸಿರುನಾಶ ಅಗಾಧ. ಈ ಹಿನ್ನೆಲೆಯಲ್ಲಿ ಯೋಚಿಸಿದರೆ, ಸೂಕ್ತ ಪ್ರಾಧಿಕಾರದಿಂದ ಅನುಮತಿ ಪಡೆದೇ ನಿರ್ಮಾಣಗೊಳ್ಳಲಿರುವ ಬಹುಮಹಡಿ ಕಟ್ಟಡವು, ಬೆಂಗಳೂರಿನ ವಾತಾವರಣವು ಇನ್ನಷ್ಟು ಕಲುಷಿತಗೊಳ್ಳಲು ತನ್ನದೇ ಆದ ಕೊಡುಗೆ ನೀಡಬಲ್ಲದು.

ಬೆಂಗಳೂರಿನ ಶ್ವಾಸಕೋಶಗಳಲ್ಲಿ ಒಂದಾಗಿರುವ ಕಬ್ಬನ್ ಪಾರ್ಕ್‌ನಲ್ಲಿ ಉದ್ದೇಶಿತ ಬಹುಮಹಡಿ ಕಟ್ಟಡದ ನಿರ್ಮಾಣದ ಕುರಿತು ಮರುಪರಿಶೀಲಿಸುವುದಾಗಿ ಸರಕಾರದ ಅಂಗಸಂಸ್ಥೆಗಳು ಈಗ ಹೇಳಿಕೆ ನೀಡಿವೆ; ಅಷ್ಟರ ಮಟ್ಟಿಗೆ ಪರಿಸರ ಪ್ರೇಮಿಗಳ ಕಾಳಜಿಗೆ ಬೆಲೆ ಸಿಕ್ಕಿದೆ ಎಂಬುದು ಸಮಾಧಾನದ ವಿಷಯ. ಇದು ಕೇವಲ, ಅಂದು ಪ್ರತಿಭಟಿಸಿದ ಕೆಲವೇ ನೂರು ಪರಿಸರ ಪ್ರೇಮಿಗಳ ಮನವಿಯ ಪ್ರಶ್ನೆಯಲ್ಲ, ಬದಲಿಗೆ ಸಮಸ್ತ ನಗರದ ಸ್ವಾಸ್ಥ್ಯದ ಪ್ರಶ್ನೆ. ಕಬ್ಬನ್ ಪಾರ್ಕ್, ಲಾಲ್ ಬಾಗ್ ಮೊದಲಾದ ಹಸಿರು ತುಂಬಿದ ಪ್ರದೇಶಗಳಲ್ಲಿ ಹೀಗೆ ಒಂದೊಂದೇ ಬಹುಮಹಡಿ ಕಟ್ಟಡಗಳನ್ನು ಕಟ್ಟುತ್ತಾ ಹೋದರೆ, ಬೆಂಗಳೂರಿನ ವಾತಾವರಣ ಕಲುಷಿತಗೊಳ್ಳದೇ ಉಳಿದೀತೆ? ಖಂಡಿತಾ ಇಲ್ಲ.

ಈ ಹಿನ್ನೆಲೆಯಲ್ಲಿ, ಸೂಕ್ತ ಅಪೀಲು ಸಲ್ಲಿಸಿ, ಉದ್ದೇಶಿತ ಕಟ್ಟಡಕ್ಕೆ ನೀಡಿರುವ ಅನುಮತಿಯನ್ನು ಮರು ಪರಿಶೀಲಿಸುವಂತೆ ಮಾಡಿ, ಕಬ್ಬನ್ ಪಾರ್ಕ್‌ನ ಹಸಿರು ಸಿರಿಯನ್ನು ಉಳಿಸಿಕೊಳ್ಳಲು ಎಲ್ಲರೂ ಮುಂದಾಗಬೇಕಾದುದು ಇಂದಿನ ಅಗತ್ಯ.

ಒದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪೊಲೀಸರಿಗೆ ಇಲ್ಲಿಯೇ ಸೂಕ್ತ ತರಬೇತಿ ನೀಡಿ

ನಮ್ಮ ರಾಜ್ಯ ಆಧುನಿಕ ತಂತ್ರಜ್ಞಾನದಲ್ಲಿ ಸಾಕಷ್ಟು ಸಾಧನೆ ಮಾಡುತ್ತಿದೆ ಎಂದು ಬೀಗುತ್ತಿರುವಾಗಲೇ, ಪೊಲೀಸರಿಗೆ ವಿದೇಶದಲ್ಲಿ ತಂತ್ರಜ್ಞಾನ ತರಬೇತಿ ನೀಡಲು ಗೃಹ ಸಚಿವ ಬಸವರಾಜ ಬೊಮ್ಮಾಯಿ ನಿರ್ಧರಿಸಿರುವುದು ವಿಪರ್ಯಾಸ! ಅಪರಾಧ ತನಿಖೆ, ಟ್ರಾಫಿಕ್ ನಿಯಂತ್ರಣ, ದೂರು ನೀಡಲು ಠಾಣೆಗೆ ಬರುವವರೊಡನೆ ಯಾವ ರೀತಿ ಸ್ಪಂದಿಸಬೇಕು, ಪೊಲೀಸ್ ಠಾಣೆ ಹೇಗೆ ಜನಸ್ನೇಹಿ ಆಗಿರಬೇಕೆಂಬುದನ್ನು ಅರಿಯಲು ವಿದೇಶಕ್ಕೆ ಹೋಗಬೇಕು! ನಮ್ಮಲ್ಲೇ ತರಬೇತಿ ನೀಡುವವರು ಇಲ್ಲವೆ? ಅಥವಾ ವಿದೇಶದಿಂದ ಅಂಥವರನ್ನು ಕರೆಯಿಸಿ ತರಬೇತಿ ನೀಡಬಹುದಲ್ಲವೇ? ವಿದೇಶದಲ್ಲಿ ಕುಳಿತು ಇಲ್ಲಿಯ ವಾಸ್ತವದ ಅರಿವು ಮೂಡಿಸಲು ಸಾಧ್ಯವೇ ಇಲ್ಲ. ಅಲ್ಲಿನ ನಾಗರಿಕರ ನಡೆವಳಿಕೆ, ಪೊಲೀಸರ ನಡಾವಳಿ ತೀರಾ ಭಿನ್ನ. ಅಲ್ಲಿ ಕಲಿತದ್ದು, ಇಲ್ಲಿ ನಿಷ್ಪ್ರಯೋಜಕ. ಹೀಗಾಗಿ ಒಂದು ನಿರ್ದಿಷ್ಟ ಹಾಗೂ ಶಾಶ್ವತ ಪರಿಹಾರ ಸಿಗಬೇಕೆಂದಿದ್ದರೆ, ಅವಶ್ಯವಿರುವ ತಂತ್ರಜ್ಞಾನವನ್ನು ಇಲ್ಲೇ ಅಭಿವೃದ್ಧಿಪಡಿಸಿ, ಅಳವಡಿಸಿಕೊಳ್ಳಬೇಕು. ಒಂದು ಮಾತನ್ನಂತೂ ಒಪ್ಪಿಕೊಳ್ಳಲೇಬೇಕು. ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನಕ್ಕಿಂತ, ಪ್ರಾಮಾಣಿಕತೆ ಹೆಚ್ಚು ಕೆಲಸಕ್ಕೆ ಬಂದೀತು. ಪಡೆಯುವ ತರಬೇತಿ, ಅನುಭವ ವಾಸ್ತವದಲ್ಲಿ ಜಾರಿ ಮಾಡಲಾಗದಿದ್ದರೆ ಅದರಿಂದೇನು ಪ್ರಯೋಜನ? ಈ ಹಿಂದೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ, ರೈತರ ತಂಡವೊಂದನ್ನು ಇಸ್ರೇಲಿಗೆ ಕಳುಹಿಸಲಾಗಿತ್ತು. ಆದರೆ ಮುಂದೇನಾಯಿತು ಎಂಬುದು ತಿಳಿದಿರುವುದೇ. ತರಬೇತಿ ಹೆಸರಲ್ಲಿ ಕೆಲ ಇಲಾಖೆ ಸಿಬ್ಬಂದಿಯನ್ನು ವಿದೇಶಕ್ಕೆ ಕಳುಹಿಸುವುದು ಯಾವ ಪ್ರಯೋಜನಕ್ಕೂ ಬಾರದು. ಜಾಣತನವಿರುವುದು ಅವುಗಳನ್ನು ಸ್ವತಃ ನಾವೇ ಅಭಿವೃದ್ಧಿಗೊಳಿಸಿಕೊಳ್ಳುವುದರಲ್ಲಿ.

– ಶಂಕರನಾರಾಯಣ ಭಟ್, ಮಾಡಗೇರಿ (ಉತ್ತರ ಕನ್ನಡ)

ಪೊಲೀಸರು, ವಕೀಲರು ಕಾನೂನು ಕಾಪಾಡಲಿ

ದೆಹಲಿ ಪೊಲೀಸ್ ಮತ್ತು ವಕೀಲರ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ದೊಂಬಿ ನಡೆದಿರುವುದು ತೀರಾ ವಿಷಾದನೀಯ ಸಂಗತಿಯಾಗಿದೆ. ಒಂದು ವರ್ಗ ಕಾನೂನು ಸುವ್ಯವಸ್ಥೆ ಕಾಪಾಡುವುದು, ಇನ್ನೊಂದು ಜನರ ಸಾಮಾಜಿಕ ನ್ಯಾಯಕ್ಕಾಗಿ ಕಾನೂನಾತ್ಮಕವಾಗಿ ನ್ಯಾಯಾಲಯದಲ್ಲಿ ಹೋರಾಡುವುದು.

ಪೊಲೀಸರು ಮತ್ತು ವಕೀಲರು ಇಬ್ಬರಿಗೂ ಸಾಮಾಜಿಕ ಜವಾಬ್ದಾರಿ, ಸಂವಿಧಾನಿಕ ಉತ್ತರದಾಯಿತ್ವದ ಕರ್ತವ್ಯಗಳಿವೆ. ಇವರಿಬ್ಬರಲ್ಲಿ ಮೊದಲು ಯಾರು ದುಡುಕಿದ್ದಾರೋ, ಅವರು ಕ್ಷಮೆ ಕೇಳಬೇಕು. ಅದರಲ್ಲೂ ಈ ಎರಡೂ ವರ್ಗಗಳು ಸಾಮಾನ್ಯ ಜನ ಸಮುದಾಯವಲ್ಲ, ಕಾನೂನು ಅರಿಯದ ಅನಕ್ಷರಸ್ಥ ಕೂಲಿಕಾರ್ಮಿಕರಲ್ಲ, ಇವರೆಲ್ಲ ಕಾನೂನುಗಳನ್ನು ಚೆನ್ನಾಗಿ ಅರಿತವರು. ಕಾನೂನು ಕಾಪಾಡುವವರು. ರಕ್ಷಿಸುವವರು, ಅಪರಾಧಿಗಳನ್ನು ಪತ್ತೆ ಹಚ್ಚಿ ಶಿಕ್ಷಿಸುವವರು. ಆ ಮೂಲಕ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುರುತರ ಜವಾಬ್ದಾರಿ ಹೊತ್ತವರು. ಈ ಘಟನೆ ಆಗಬಾರದಿತ್ತು. ಇದೊಂದು ರೀತಿಯಲ್ಲಿ 'ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ಇದೊಂದು ಸಣ್ಣ ಘಟನೆಯೆನಿಸಿದರೂ, ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿದೆ. ಸಮೂಹ ಮಾಧ್ಯಮಗಳಲ್ಲಿ ವೈರಸ್‌ನಂತೆ ಹರಡಿ, ಜನ ಸಾಮಾನ್ಯರಲ್ಲಿ ಕಾನೂನು ಪಾಲನೆ ಬಗ್ಗೆ ಅಪನಂಬಿಕೆ ಹುಟ್ಟುವಂತಾಗಿದೆ. ದೆಹಲಿ ಕೇಂದ್ರಾಡಳಿತ ಪ್ರದೇಶವಾಗಿರುವುದರಿಂದ ಪೊಲೀಸ್ ವ್ಯವಸ್ಥೆಯು ರಾಜ್ಯ ಸರಕಾರದ ವ್ಯಾಪ್ತಿಯಲ್ಲಿರದೇ ಕೇಂದ್ರ ಗೃಹ ಇಲಾಖೆಯ ಅಧೀನದಲ್ಲಿದೆ. ಈ ಘಟನೆಗೆ ರಾಜಕೀಯ ಲೇಪನ ಹಚ್ಚಬಾರದು. ದೇಶದ ಭದ್ರತೆ, ಕಾನೂನು ಸುವ್ಯವಸ್ಥೆ ದೃಷ್ಟಿಕೋನದಿಂದ ಇಂಥ ಅಹಿತಕರ ಘಟನೆಗಳು ನಡೆಯದಂತೆ, ಜನ ನಾಯಕರೂ ಜವಾಬ್ದಾರಿಯಿಂದ ವರ್ತಿಸಬೇಕು. ರಾಜಕೀಯ ಕೆಸರೆರಚಾಟ ಮಾಡಿದರೆ, ಇಡೀ ವ್ಯವಸ್ಥೆಯ ಮೇಲೆ ಜನರು ನಂಬಿಕೆ ಕಳೆದುಕೊಳ್ಳುವಂತಾಗಬಹುದು ಇದರಿಂದ ಮುಂದೆ ದೊಡ್ಡ ಬೆಲೆ ತೆರಬೇಕಾಗುವುದು.

–ಪ್ರಹ್ಲಾದ್ ವಾ ಪತ್ತಾರ, ಯಡ್ರಾಮಿ, ಕಲಬುರ್ಗಿ

ಭಟ್ಟರ್ ಸ್ನಾಕ್

- **ಶ್ರೀನಿವಾಸ ಶೆಣೈ, ಹನುಮಂತನಗರ**
ಮಾಜಿ ಪ್ರಧಾನಿ ಗೌಡರು ಹುಟ್ಟು ಹೋರಾಟಗಾರ, ಒಪ್ಪುತ್ತೀರಾ?
– ಸಬ್ ಇನ್‌ಸ್ಪೆಕ್ಟರ್ ವರ್ಗಾವಣೆಗೆ ಒತ್ತಾಯಿಸಿ ಮತ್ತೊಮ್ಮೆ ಸಾಬೀತುಪಡಿಸಿದರಲ್ಲ?!

- **ಚಂದ್ರಕಾಂತ ಬಲಮೆತ್ತು, ರಾಯಚೂರು**
ಪ್ರಧಾನಿಯಾದವರು ಪೊಲೀಸರ ವರ್ಗಾವಣೆಗೆ ರಚ್ಚೆ ಹಿಡಿಯುವುದು ಸರೀನಾ?
– ಇಲ್ಲದಿದ್ದರೆ ಅವರು ಮಣ್ಣಿನ ಮಗ ಎಂದು ಕರೆಯಿಸಿಕೊಳ್ಳುತ್ತಿರಲಿಲ್ಲ!

- **ರಾಮದಾಸ ಕಾಮತ, ಹುಬ್ಬಳ್ಳಿ**
ಭಟ್ರೇ, ಕವನ ವಾಚನ ಪಂಥಾಹ್ವಾನಕ್ಕೆ ಮೊಯಿಲಿ ಅವರನ್ನೇಕೆ ಕರೆಯಲಿಲ್ಲ?
– ಅವರನ್ನು ಕರೆಯೋದು ಮಹಾಕಾವ್ಯ ವಾಚನ ಪಂಥಾಹ್ವಾನಕ್ಕೆ ಮಾತ್ರ!

- **ಎಂ.ಕೆ. ನಾಗರಾಜ, ದಾವಣಗೆರೆ**
ಪತ್ರಕರ್ತರಿಗೆ ಸಿಗಬಹುದಾದ ದೊಡ್ಡ ಹುದ್ದೆ ಸಿಎಂ ಮಾಧ್ಯಮ ಕಾರ್ಯದರ್ಶಿ ಹುದ್ದೆ ಅಲ್ಲವಾ?
– ಹೂಂ ಕಣಪ್ಪಾ... ಅದು ಮಾಜಿ ಪತ್ರಕರ್ತರಿಗೆ ಸಿಗಬಹುದಾದ ದೊಡ್ಡ ಹುದ್ದೆ!

- **ವಿನೋದ್ ಕಶ್ಯಪ, ವಿಲ್ಸನ್ ಗಾರ್ಡನ್**
ಹೆಂಡತಿ ಮತ್ತು ಗರ್ಲ್ ಫ್ರೆಂಡ್ ಇಬ್ಬರೂ ಮುನಿಸಿಕೊಂಡಿದ್ದಾರೆ, ಏನು ಮಾಡಲಿ?
– ಇದು ಒಂಥರಾ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳ ಜತೆ ಮುನಿಸಿಕೊಂಡ ಕುಮಾರಸ್ವಾಮಿ ಕಥೆ ಆಯ್ತಲ್ಲ ನಿಂದು!

- **ವಿ.ಹೇಮಂತಕುಮಾರ, ಬೆಂಗಳೂರು**
ಸಲಹೆಗಾರರ ಮಾತುಗಳನ್ನು ಮೋದಿ ಕೇಳುವುದಿಲ್ಲವಾ?
– ಕೇಳುತ್ತಾರೆ, ಕೊನೆಗೆ ತಮಗೆ ಸರಿ ಕಂಡ ನಿರ್ಧಾರ ತೆಗೆದುಕೊಳ್ಳುತ್ತಾರೆ!

- **ಪ್ರದೀಪ ಅಗಸಿಬಾಗಿಲು, ಬೆಂಗಳೂರು**
ಯಡಿಯೂರಪ್ಪನವರು ಮುಂದಿನ ವರ್ಷದಿಂದ ನಗುತ್ತಾರಂತೆ, ನಿಜವಾ?
– ಈ ಸಮಾಚಾರ ನಮ್ಮ ಟಿವಿ ಚಾನೆಲ್ಲುಗಳಿಗೆ ಗೊತ್ತಾದರೆ, ಬ್ರೇಕಿಂಗ್ ನ್ಯೂಸ್ ಬದಲು ಕೌಂಟ್ ಡೌನ್ ಶುರು ಮಾಡ್ತವೆ!

- **ಹರಿಪ್ರಸಾದ್ ಅಂಚಿನಮನೆ, ಶಿವಮೊಗ್ಗ**
ನೀವು ವಿದೇಶಕ್ಕೆ ಮತ್ತೆ ಹೊರಡುವ ದಿನಗಳು ಹತ್ತಿರ ಬಂತಂತೆ?
– ಒಂದು ತಿಂಗಳು ಎಲ್ಲೂ ಹೋಗದೇ, ಬೆಂಗಳೂರಿನಲ್ಲೇ ಇದ್ದುದು ನಿನಗೆ ಕಣ್ಣಿಗೆ ಕಾಣೊಲ್ಲ?!

- **ಮಹೇಶ ತೀರ್ಥಹಳ್ಳಿ, ಬೆಂಗಳೂರು**
ಜಯವೀರ ಗೌಡ ಅವರ ಬಗ್ಗೆ ಅನೇಕರು ಬಹಳ ತಲೆಕೆಡಿಸಿಕೊಂಡಿದ್ದಾರಲ್ಲ?
– ವಿಚಾರಿಸಿ ನೋಡಿ, ಕೆಡಿಸಿಕೊಂಡಿದ್ದು ತಲೆಯೊಂದೇ ಇರಲಿಕ್ಕಿಲ್ಲ!

- **ಸತ್ಯಪ್ರಕಾಶ ಕೋಟಿ, ಚಾಮರಾಜನಗರ**
ರಾಜಕಾರಣದಲ್ಲಿ ಯಾರೂ ಮಿತ್ರರಿಲ್ಲ, ಶತ್ರುಗಳಿಲ್ಲ ಅಂತಾರಲ್ಲ, ಹಾಗೆಂದರೇನು?
– ಅಂದರೆ ಬೇಕಾಬಿಟ್ಟಿಯಾಗಿರಬಹುದು ಎಂದರ್ಥ!

ವೈದ್ಯರ ವಿರುದ್ಧ ಕತ್ತಿ ಮಸೆಯುವ ಸಮಾಜ

ಅವಲೋಕನ

ಡಾ. ಸಿ.ಜಿ.ರಾಘವೇಂದ್ರ ವೈಲಾಯ, ಮಕ್ಕಳ ತಜ್ಞರು.
drvailaya1981@gmail.com

ಅಶೋಕನ ಕಾಲದಲ್ಲಿ ಬೌದ್ಧರು ಉಚ್ಛ್ರಾಯ ಸ್ಥಿತಿಯಲ್ಲಿದ್ದರು. ರಾಜಾಶ್ರದಿಂದ ಕೊಬ್ಬಿದ ಭಿಕ್ಷುಗಳಿಗೆ ಸುಖ ಜೀವನ ಒಗ್ಗಿ ಹೋಗಿತ್ತು. ನಂತರ ಬಂದ ಪುಶ್ಯಮಿತ್ರಶುಂಗನ ಕಾಲಕ್ಕೆ ವೈದಿಕಧರ್ಮವು ತಾನು ಮತ್ತೆ ಪ್ರವರ್ಧಮಾನಕ್ಕೆ ಬಂದಿತು. ನಂತರ ಆದಿಶಂಕರಾಚಾರ್ಯರ ಕಾಲಕ್ಕೆ ಸನಾತನ ಧರ್ಮಿಯರಿಗೆ ರಾಜಾಶ್ರಯವು ಇನ್ನೂ ಹೆಚ್ಚಾಯಿತು. ಹೀಗೆ ಅವರಿಗೆ ಮತ್ತಷ್ಟು ಬಲವರ್ಧನೆಯಾದದ್ದನ್ನು ಸಹಿಸದ ಗಡಿನಾಡ ಬೌದ್ಧರು ಅಸೂಯೆಯಿಂದ ವಿದೇಶಿ ಇಸ್ಲಾಂ ಆಕ್ರಮಣಕಾರರನ್ನು ದೇಶಕ್ಕೆ ಸ್ವಾಗತಿಸಿದರು. ಸಿಂಧ್ ಪ್ರಾಂತದ ರಾಜ ದಾಹಿರನಿಗೆ ಮೋಸ ಮಾಡಿ ಹೇಗಾದರೂ ವೈದಿಕರನ್ನು ಮುಗಿಸಬೇಕೆಂದುಕೊಂಡರು. ಆದರೆ ಈ ದಾಳಿಕೋರರು ಮೊತ್ತಮೊದಲು ಹೊಸಕಿಹಾಕಿದ್ದು ಅದೇ ಬೌದ್ಧರನ್ನು. ವಿಪರ್ಯಾಸ ನೋಡಿ, ಯಾವ ವೈದಿಕ ಧರ್ಮವು ತನಗೆ ಜನ್ಮ ನೀಡಿತ್ತೋ ಅದಕ್ಕೇ ಮಾತೃದ್ರೋಹವೆಸಗುವ ಹೀನ ಹುನ್ನಾರಕ್ಕೆ ವಿಧಿಯು ತಕ್ಕ ಪಾಠ ಕಲಿಸಿತ್ತು. ಹೀಗೆ ಮಾತೃನೆಲ ಭಾರತದಿಂದ ಬೌದ್ಧರು ಮೂಲೋತ್ಪಾಟನೆಯಾಗಿದ್ದು. ಇಲ್ಲಿ ಮನುಕುಲಕ್ಕೊಂದು ಶಾಶ್ವತ ಪಾಠವಿದೆ. ಕೃತಘ್ನತೆಯ ಪಾಪಕ್ಕೆ ಫಲ ಏನೆನ್ನುವ ಸಾರ್ವಕಾಲಿಕ ಎಚ್ಚರಿಕೆಯಿದೆ.

ಯಾವ ಸಮಾಜ ತನ್ನ ಶ್ರಮಿಕರಿಗೆ ಋಣಿಯಾಗಿರದೋ ಅದು ಬಲು ಬೇಗ ನಾಶವಾಗುತ್ತದೆ. ಇಂದು ದೇಶದಲ್ಲಿ ಭ್ರಷ್ಟವ್ಯವಸ್ಥೆಯು ಜನರಲ್ಲಿ ಮೂಡಿಸಿರುವ ಅಸಹನೆಯ ಕೋಪಕ್ಕೆ ಬಲಿಯಾಗುವುದು ಅಮಾಯಕರು, ಅಸಹಾಯಕರು. ಇದಕ್ಕೆ ಯುಕ್ತ ಉದಾಹರಣೆಯೆಂದರೆ ವೈದ್ಯರು. ಆಳುಗರ ಅಸಮರ್ಪಕ ನಿರ್ವಹಣೆಯಿಂದ ಹಳ್ಳ ಹಿಡಿದಿರುವ ನಮ್ಮ ಸರಕಾರಿ ಆರೋಗ್ಯ ಸೇವೆಯಿಂದ ರೋಗಿಗಳು ಸಂತುಷ್ಟರಾಗಿಲ್ಲವೆನ್ನುವುದು ಸತ್ಯ. ಹಾಗೆಯೇ ನಮ್ಮಲ್ಲಿ ವ್ಯಕ್ತಿಗಳ ತಲಾ ಆದಾಯ ಕಡಿಮೆ ಇರುವುದರಿಂದ ಜನರಿಗೆ ಕೆಲವೊಮ್ಮೆ ಪ್ರಪಂಚದ ಇತರೆಡೆಗೆ ಹೋಲಿಸಿದರೆ 10–20ಪಟ್ಟು ಅಗ್ಗವಾಗಿರುವ ನಮ್ಮ ಖಾಸಗಿ ಆರೋಗ್ಯ ಸೇವೆಗಳೂ ದುಬಾರಿಯೆನ್ನಿಸುವುದೂ ಸಹಜವೇ. ಆದರೆ ಇದಕ್ಕೆ ಕಾರಣ ವೈದ್ಯರಲ್ಲ. ವೈದ್ಯರು ಕೇವಲ ಆರೋಗ್ಯ ವ್ಯವಸ್ಥೆಯಲ್ಲಿ ಶ್ರಮಿಕರಷ್ಟೇ, ಆಳುಗರಲ್ಲ. ದುಬಾರಿ ವಿಮಾನಯಾನಕ್ಕೆ ಹೇಗೆ ಪೈಲಟ್ ಕಾರಣನಲ್ಲವೋ ಹಾಗೇ ವೈದ್ಯಕೀಯರಂಗದ ಆರ್ಥಿಕ ಸ್ಥಿತಿಗೆ ವೈದ್ಯರೂ ಕಾರಣರಲ್ಲ. ನಿಮಿತ್ತ ಮಾತ್ರಂ ಭವ ಎಂಬಂತೆ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತೆ ನಮ್ಮ ಸಮಾಜ ಮಾತ್ರ ತನ್ನೆಲ್ಲಾ ಅಸಹನೆ, ಹತಾಶೆಗಳನ್ನು ತೋರಿಸುವುದು ವೈದ್ಯರ ಮೇಲೆಯೇ.

ಇತ್ತೀಚೆಗೆ ಮಿಂಟೋ ಆಸ್ಪತ್ರೆಯಲ್ಲಿ ನಡೆದ ಘಟನೆಯೊಂದು ದೇಶದ ಗಮನ ಸೆಳೆದಿದೆ. ಗಂಟೆಗಟ್ಟಲೇ ಮೇಕಪ್ ಮಾಡಿಕೊಂಡು ಸಾಕಷ್ಟು ರಿಹರ್ಸಲ್ ಮಾಡಿ ಕ್ಯಾಮೆರಾಗಳೊಂದಿಗೆ ತಯಾರಾಗಿ ಬಂದ ಮಹಿಳಾಮಣಿಗಳ ತಂಡವೊಂದು ಅಸಭ್ಯವಾಗಿ ಘೋಷಣೆಗಳನ್ನು ಕೂಗುತ್ತಾ ಹಲವು ಪೋಲಿಪುಂಡರೊಂದಿಗೆ ನುಗ್ಗಿಬಂದು ಕರ್ತವ್ಯನಿರತ ಮಹಿಳಾ ವೈದ್ಯರಿಗೆ ಬೆದರಿಕೆ ಹಾಕಿ, ಅಸಭ್ಯವಾಗಿ ವರ್ತಿಸಿ ತಮ್ಮ ಅನಾಗರಿಕತೆಯ ಅನಾವರಣ ಮಾಡಿದ್ದನ್ನು ಇಡೀ ಕರ್ನಾಟಕ ನೋಡಿದೆ. ಇವರು ಕನ್ನಡ ಭಾಷಾ ಹೋರಾಟಗಾರರ ಸೋಗಿನಲ್ಲಿ ಬಂದಿದ್ದರು. ಹಿಂದೆ ಇಂಥದ್ದೇ ಘಟನೆಯೊಂದು ಉತ್ತರಪ್ರದೇಶದಲ್ಲಿ ನಡೆದಾಗ ಇಡೀ ದೇಶದ ಮಾಧ್ಯಮ ವೈದ್ಯರ ಬೆನ್ನಿಗೆ ನಿಂತಿತ್ತು. ಆದರೆ ನಮ್ಮ ಕರುನಾಡ ಮಾಧ್ಯಮಗಳಿಗೆ ಮಾತ್ರ ಸಾಮಾಜಿಕ ಬದ್ಧತೆಗಿಂತ TRP ಹುಚ್ಚೇ ಹೆಚ್ಚಾಯಿತೆನ್ನಿಸುತ್ತದೆ.

ಹಿಂದೆ ಕೆಲವು ಕಳ್ಳರು ಜೈಲಿನಿಂದ ಹೊರಬಂದಮೇಲೆ ತಮ್ಮನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಬಿಂಬಿಸಿಕೊಂಡು ಸರಕಾರದ ಪಿಂಚಣಿ ಪಡೆದಂತೆ ಈ ಪುಂಡರೂ ತಮ್ಮನ್ನು ಹಾಗೇ ಅಂದುಕೊಂಡಿದ್ದಾರೆ. ಜನರನ್ನೂ ಹಾಗೇ ನಂಬಿಸುತ್ತಿದ್ದಾರೆ. ಅನ್ಯಾಯದ ವಿರುದ್ಧ ವೈದ್ಯರು ಮುಷ್ಕರ ಮಾಡಿದಾಗ ರೋಗಿಗಳ ಬಗ್ಗೆ ಗ್ಯಾಲನ್ನುಗಟ್ಟಲೆ ಮೊಸಳೆ ಕಣ್ಣೀರು ಸುರಿಸುವ ಸಮಾಜ ಮಾಧ್ಯಮಗಳು ಈ ಪುಂಡರ ದುಂಡಾವರ್ತನೆಯಿಂದ ಬಡ ರೋಗಿಗಳಿಗಾದ ಅನಾನುಕೂಲದ ಬಗ್ಗೆ ಒಂದೂ ಚಕಾರವೆತ್ತಿಲ್ಲ. ಇದು ಬೂಟಾಟಿಕೆಯ ಪರಾಕಾಷ್ಠೆಯಲ್ಲವೇ? ಅವರಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಲು ಸಂವಿಧಾನದ ಯಾವ ವಿಧಿ ಅವಕಾಶ ನೀಡಿದೆ? ಇದು Public Safety ಆ್ಯಕ್ಟಿನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಲ್ಲವೇ? ಲಭ್ಯವಿರುವ ಅತ್ಯಲ್ಪ ಸೌಲಭ್ಯಗಳನ್ನು ಬಳಸಿ ಶಕ್ತಿಮೀರಿ ಜನರ ಸೇವೆಯನ್ನು ನಿಸ್ವಾರ್ಥವಾಗಿ ಮಾಡುತ್ತಿರುವ ಸರಕಾರಿ ವೈದ್ಯರಿಗೆ ಕೃತಘ್ನ ಸಮಾಜವು ತಾನು ನೀಡುವ ಬಳುವಳಿ ಇದೇ ಏನು? ಕಾಶ್ಮೀರದಲ್ಲಿ ಸೈನಿಕರಿಗೆ ಕಲ್ಲು ಹೊಡೆದರೆ ಜನರಲ್ಲಿ ಕಾಣುವ ಸಹಾನುಭೂತಿಯು ವೈದ್ಯರ ಕುರಿತಾಗಿ ಏಕೆ ಬಾರದು? ಭಾರತೀಯ ವೈದ್ಯರು ಬದ್ಧತೆ, ಕ್ಷಮತೆ ಫಲಿತಾಂಶದಲ್ಲಿ ಪ್ರಪಂಚದ ಇತರೇ ದೇಶಗಳ ವೃತ್ತಿ ಬಾಂಧವರಿಗಿಂತ ಒಂದು ಹೆಜ್ಜೆ ಮುಂದೆಯೇ ಇದ್ದಾರೆ. ಹೀಗಿದ್ದೂ ವೈದ್ಯರೇ ಏಕೆ ಸಮಾಜದ ಕೆಂಗಣ್ಣಿಗೆ ಸುಲಭವಾಗಿ ಈಡಾಗುತ್ತಾರೆ? 80–90ರ ದಶಕಗಳಲ್ಲಿ ಪ್ರತಿಭಾವಂತ ಯುವಜನತೆ ವೈದ್ಯ ವೃತ್ತಿಯನ್ನು ತಾವು ಆಯ್ಕೆ ಮಾಡಿದ್ದು ತಪ್ಪಾಯಿತು ಎಂದು ಈಗ ಕೈಕೈ ಹಿಸುಕಿಕೊಳ್ಳುವಂತಾಗಿದೆ.

ಇದೇ ಅಸಹನೆ ಕೆಲಸವನ್ನೇ ಮಾಡದ ಸರಕಾರಿ ನೌಕರರ ವಿರುದ್ಧವೋ, ವರ್ಷಗಟ್ಟಲೇ ಕೋರ್ಟಿನ ಮೆಟ್ಟಿಲು ಹತ್ತಿಸಿ ಸತಾಯಿಸುವ ನ್ಯಾಯಾಧೀಶರ ವಿರುದ್ಧವೋ ನಮ್ಮ ಜನ ಏಕೆ ಪ್ರದರ್ಶಿಸುವುದಿಲ್ಲ? ವೈದ್ಯರ Gentleman ನಡತೆಯೇ ಅವರ ಬಲಹೀನತೆಯೆಂದು (Soft Target) ಸಮಾಜ ತಿಳಿದಿದೆಯೇ? ಇದು ನಮಗೆಲ್ಲಾ ಆತ್ಮಾವಲೋಕನದ ಸಮಯ. ಇದು ಉಪಾಧ್ಯಾಯಶ್ಚ ವೈದ್ಯಶ್ಚ ಅಂಬಿಗಶ್ಚ ಕಾರ್ಯ ಪೂರ್ಯಂತೇ ಅಪ್ರಯೋಜಕಾಃ ಎನ್ನುವ ಸುಭಾಷಿತವನ್ನು ಪುಷ್ಟೀಕರಿಸುತ್ತದೆ.

ಈ ರೀತಿ ಆಕ್ಷೇಪದ ಹಿಂದೆ ವೈದ್ಯರು ಮಾಡಿದ್ದೆಲ್ಲವೂ ಸರಿಯೆಂದು ಸಾರಾಸಗಟಾಗಿ ಸೈ ಎನ್ನುವ ಏಕಪಕ್ಷೀಯ ಧೋರಣೆಯಂತೂ ನಮ್ಮದಲ್ಲ. ತಪ್ಪು ಮಾಡಿದವರೆಲ್ಲರೂ ಶಿಕ್ಷಾರ್ಹರೇ. ಆದರೆ ಅದರ ನಿರ್ಧಾರ ಸೂಕ್ತ ಕಾನೂನಿನ ಚೌಕಟ್ಟಿನಲ್ಲಿ ಆಗಬೇಕೇ ಹೊರತು Mob Justice ರೀತಿ ಅಲ್ಲ. ಸರಿತಪ್ಪುಗಳ ತಕ್ಕಡಿಯನ್ನು ಹಾದಿಬೀದಿಯಲ್ಲಿ ತೂಗುಹಾಕುವುದಲ್ಲ. ಅದಕ್ಕೆಂದೇ ದೇಶದಲ್ಲಿ ಕಾನೂನಿನ ವ್ಯವಸ್ಥೆಯಿದೆ. ಅದನ್ನು ಬಿಟ್ಟು ವೈದ್ಯರನ್ನು ಅವಾಚ್ಯವಾಗಿ ನಿಂದಿಸುವುದು, ಹೊಡೆಯುವುದು, ಗುಂಪು ಗಲಭೆ ಮಾಡುವುದು, ಕೊಲ್ಲುವುದು, ಆಸ್ಪತ್ರೆಯ ವಸ್ತುಗಳಿಗೆ ಹಾನಿ ಮಾಡುವುದು ಇವೆಲ್ಲಾ ಸಭ್ಯ ಸಮಾಜದ ರೀತಿನೀತಿಗಳಲ್ಲ. ಅದೇನಿದ್ದರೂ ಹಮ್ಮುರಬಿ ಕೋಡ್‌ನ ಕಾಲದ ಮಾತ್ಸ್ಯ ನ್ಯಾಯವಾದೀತು. ತನಿಖೆಯಿಂದ ನಿರ್ದೋಷಿಯಾಗಿ ಹೊರಬರುವ ವೈದ್ಯರು ಜೀವಮಾನವೆಲ್ಲಾ ಕಷ್ಟಪಟ್ಟು ಗಳಿಸಿದ ಹೆಸರು ಒಮ್ಮೆ ಹಾಳಾದರೆ ಮತ್ತೆ ಸರಿಪಡಿಸಲು ಸಾಧ್ಯವೇ? ಒಡೆದ ಕನ್ನಡಕದ ಗಾಜನ್ನು ಮತ್ತೆ ಜೋಡಿಸಬರುವದೇ?

ನಮ್ಮ ದೇಶವು ಈಗ ವೈದ್ಯರ ಪಾಲಿಗೆ ಅಕ್ಷರಶಃ ನರಕವಾಗಿ ಪರಿಣಮಿಸುತ್ತಿದೆ. ಬದುಕು, ರಕ್ಷಣೆ, ಅಭಿವ್ಯಕ್ತಿ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯವೇ ಮೊದಲಾದ ಮೂಲಭೂತ ಹಕ್ಕುಗಳೂ ವೈದ್ಯರ ಪಾಲಿಗೆ ಮರೀಚಿಕೆಯಾಗುತ್ತಿದೆ. ವೈದ್ಯರ ಮೇಲಿನ ಹಲ್ಲೆ ಮೊದಲು ಅಲ್ಲೊಮ್ಮೆ ಇಲ್ಲೊಮ್ಮೆ ಎಂಬಂತೆ ಕೇಳಿಬರುತ್ತಿದ್ದುದು ಈಗ ನಿತ್ಯರೋದನೆಯಾಗಿದೆ. ದಿನವೂ ಸಾಯುವವರಿಗೆ ಅಳುವವರಾರು ಎಂಬಂತಾಗಿದೆ. ಇತ್ತೀಚೆಗೆ ಬಂಗಾಳದ ಎಸ್ಟೇಟ್ ಒಂದರಲ್ಲಿ ರೋಗಿಯೊಬ್ಬನ ಸಂಬಂಧಿಗಳ ಕ್ರೌರ್ಯಕ್ಕೆ ಬರ್ಬರವಾಗಿ ಹತ್ಯೆಯಾದ ವಯೋವೃದ್ಧ ವೈದ್ಯರ ಕೊಲೆಯು ನಿರ್ಭಯಾಳ ಪ್ರಕರಣದ ನೆನಪು ಮರುಕಳಿಸುವಂತೆ ಮಾಡಿದೆ.

ತಮ್ಮ ಆರೋಗ್ಯದ ರಕ್ಷಕರಾದ ವೈದ್ಯರಿಗೆ ನಿರ್ಭಯವಾಗಿ ಕಾರ್ಯನಿರ್ವಹಿಸಲು ಅಸಾಧ್ಯವೆನ್ನುವ ವಾತಾವರಣವನ್ನು ತಂದಿಟ್ಟ ಪ್ರಸಕ್ತ ಸ್ಥಿತಿಯು ನಮಗೆ ಶುಂಗರ ಕಾಲದ ಬೌದ್ಧರ ನೆನಪು ತಂದಿತು. ತಾನು ಕುಳಿತ ಕೊಂಬೆಯನ್ನೇ ತುಂಡರಿಸಹೊರಟ ದಡ್ಡನಂತೆ. ಸಮಾಜದ ಮಾನಸಿಕ ಆರೋಗ್ಯಕ್ಕೆ ಚಿಕಿತ್ಸೆ ನೀಡಬಲ್ಲ ವೈದ್ಯರಾರು? ಪರಿಸ್ಥಿತಿ ಹೀಗೇ ಮುಂದಿವರಿದರೆ ಮುಂದೆ ವೈದ್ಯರಾಗಲು ಯಾರೂ ಮುಂದೆ ಬರುವುದು ಕಷ್ಟ. ಅದರ ಮುನ್ಸೂಚನೆ ಈಗಾಗಲೇ ಕಾಣುತ್ತಿದೆ. ಅಂಥ ದಿನಗಳೆಂದೂ ಬಾರದಿರಲಿ ಎಂಬುದೇ ನಮ್ಮ ಆಶಯ. 'ಜೀವೇಮ ಶರದಶ್ಶತಂ' ಎನ್ನುವ ನಮ್ಮ ಆಶಯ ಸಾಧ್ಯವಾಗಬೇಕಾದರೆ ಉತ್ತಮ ವೈದ್ಯರು ಬೇಕಲ್ಲವೇ? ಇಲ್ಲವಾದರೆ ದೇಶದ ಆರೋಗ್ಯಕ್ಕೆ ದೇವರೇ ಗತಿ? ಹಾಗಾಗಿ ಸಮಾಜವು ವೈದ್ಯರ ಬಗೆಗಿನ ಪೂರ್ವಾಗ್ರಹ ಗಳನ್ನು ಬಿಟ್ಟು ನೈಜ ವಾಸ್ತವಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕಿದೆ.